ಮೊತ್ತವನ್ನು ಬಿಡುಗಡೆ ಮಾಡುತ್ತಿರುವುದರಿಂದ ಎಷ್ಟು ಸಾಧ್ಯವೋ ಅಷ್ಟು ದುರಸ್ತಿ ಕಾರ್ಯ ಕೈಗೊಳ್ಳಲಾಗುತ್ತಿದೆ.

ಇ) ಬಂದಿದೆ.

ಈ) ಕೆಟ್ಟು ಹೋಗಿರುವ ನೀರೆತ್ತುವ ಯಂತ್ರವನ್ನು ದುರಸ್ತಿಗೊಳಿಸಲು ಈಗಾಗಲೇ ರೂ. 8.28 ಲಕ್ಷ ಮೊತ್ತದ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ ಮತ್ತು ಮಹಾನಗರಪಾಲಿಕೆ, ಗುಲ್ಬರ್ಗಾ ಇವರಿಂದ ಹಣ ಬಿಡುಗಡೆಯಾದ ನಂತರ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗುವುದು ಅದಲ್ಲದೆ ಜಲ ಮಂಡಳಿಯ ಧಾರವಾಡ ವಿಭಾಗದಲ್ಲಿ ಲಭ್ಯವಿರುವ ಹೆಚ್ಚುವರಿ ನೀರೆತ್ತುವ ಯಂತ್ರವನ್ನು ಗುಲ್ಬರ್ಗಾಕ್ಕೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಉ) ಗುಲ್ಬರ್ಗಾ ನಗರಕ್ಕೆ ನೀರು ಪೂರೈಸಲು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಿಂದ ಸರಡಗಿ ಮೂಲ ಸ್ಥಾವರಕ್ಕೆ ವಿದ್ಯುತ್ ಒದಗಿಸಲು ಪ್ರತ್ಯೇಕವಾದ ಫೀಡರ್, ಲೈನ್ ಒದಗಿಸಿರುವುದರಿಂದ ಜನರೇಟರ್ ಅಳವಡಿಸುವ ಅವಶ್ಯಕತೆ ಇರುವುದಿಲ್ಲ.

ಊ) ಉದ್ಭವಿಸುವುದಿಲ್ಲ.

916(1018) ಶ್ರೀ ಚಂದ್ರಶೇಖರ ಪಾಟೀಲ್ ರೇವೂರ, (ಗುಲ್ಬರ್ಗಾ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1987ರ ನಂತರ ಗುಲ್ಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಗುತ್ತಿಗೆ ಹಾಗೂ ದಿನಗೂಲಿ ಆದಾರದ ಮೇಲೆ ನೇಮಕ ಮಾಡಿಕೊಂಡಿರುವ ನೌಕರರ ಸಂಖ್ಯೆ ಎಷ್ಟು :

ಆ) 1987ರ ಸರ್ವೋಚ್ಚ ನ್ಯಾಯಾಲಯದ ಆದೇಶ ಉಲ್ಲಂಘಿಸಿ ನೇಮಕ ಮಾಡಿಕೊಂಡಿರುವುದು ನಿಜವೇ :

ಇ) ಇಲ್ಲಿಯತನಕ ಗುತ್ತಿಗೆ ಹಾಗೂ ದಿನಗೂಲಿ ಆಧಾರದ ಮೇಲೆ ನೇಮಕಾತಿ ಮಾಡಿಕೊಂಡಿರುವ ನೌಕರರ ಸಂಖ್ಯೆ ಎಷ್ಟು (ಹುದ್ದೆ ಸಹಿತ ವಿವರ ನೀಡುವುದು) :

ಶ್ರೀ ಎನ್.ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ಒಟ್ಟು 9 ಜನ

ಆ) ಇಲ್ಲ. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಕಾಯ್ದೆ, 1987ರ ಕಲಂ–52 ರಲ್ಲಿ ಪ್ರಾಧಿಕಾರಗಳಿಗೆ ನೀಡಿರುವ ಅದಿಕಾರದನ್ವಯ ನೇಮಕಾತಿ ಮಾಡಿಕೊಳ್ಳಲಾಗಿದೆ.

ಇ) ಪ್ರಾಧಿಕಾರದಲ್ಲಿ ಗುತ್ತಿಗೆ ಹಾಗೂ ದಿನಗೂಲಿ ಆಧಾರದ ಮೇಲೆ 9 ಸಂಖ್ಯೆ ನೌಕರರನ್ನು ನೇಮಕ ಮಾಡಿಕೊಳ್ಳಲಾಗಿದೆ.

1. ಕಾರ್ಯದರ್ಶಿ– 1 – ಗುತ್ತಿಗೆ
2. ಶೀಘ್ರಲಿಪಿಗಾರ– 1 – ಗುತ್ತಿಗೆ
3. ಬೆರಳಚ್ಚುಗಾರ– 1 – ಗುತ್ತಿಗೆ
4. ಸಿಪಾಯಿ– 1 – ಗುತ್ತಿಗೆ
5. ಅಕ್ಷರಸ್ಥ ಸಹಾಯಕ – 2
6. ವಾಹನ ಚಾಲಕ – 2 ದಿನಗೂಲಿ ನೌಕರರು
7. ಮಾಲಿ – 1